1	2	3
3	Bellary	11276
4	Bijapur	5418
5	Bidar	6740
6	Chickmagalur	5110
7	Chitradurga	6800
8	Kodagu	2994
9	Dharwad	11475
10	Gulbarga	10806
11	Hassam	8092
12	U.K	6406
13	D.K	13910
14	Kolar	11093
15	Mandya	6943
16	Mysore	18028
17	Raichur	7044
18	Shimoga	11043
19	Tumkur	17516
20	Bangalore (R)	13547
21	Bagalkot	5317
22	Chamarjanagar	6716
23	Davanagere	5998
24	Gadag	5908
25	Haveri	6823
26	Koppal	3402
27	Udupi	5786
	Total	**294620**

ರೇಷ್ಮೆ ಬೆಳೆಗಾರರ ಕುಂದುಕೊರತೆಗಳು

396(371) ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ರೇಷ್ಮೆ ಗೂಡಿನ ಬೆಲೆ ಕುಸಿತದಿಂದಾಗಿ ರೈತರು ಕಂಗಾಲಾಗಿ ರೇಷ್ಮೆ ಬೆಳೆಯನ್ನೇ ಮಾಟಕುಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದರ ಬಗ್ಗೆ ಸರ್ಕಾರದ ನಿಲುವೇನು?

ಅ. ರೇಷ್ಮೆ ಬೆಳೆಯನ್ನು ಅಧುನೀಕರಣಗೊಳಿಸಲು ಹಾಗೂ ಯಾಂತ್ರಿಕರಣಗೊಳಿಸಲು ಇಲಾಖೆ ಕೈಗೊಂಡಿರುವ ಕ್ರಮಗಳೇನು?

ಇ. ಹೆಚ್ಚು ರೈತರನ್ನು ರೇಷ್ಮೆ ಬೆಳೆ ಕಡೆಗೆ ಆಕರ್ಷಿಸಲು ಹಾಗೂ ಚೀನಾ ಮಾದರಿ ರೇಷ್ಮೆಯಿಂದ ವಿಮುಖರನ್ನಾಗಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು)

ಅ. ಹೌದು

ಆ. ಮಾರ್ಚ್ 2002ರ ಅಂತ್ಯಕ್ಕೆ 1,16,158 ಹೆಕ್ಟೇರ್ ಹಿಪ್ಪುನೇರಳೆ ವಿಸ್ತೀರ್ಣ ಇದ್ದದ್ದು ಜನವರಿ 2003 ರ ಅಂತ್ಯಕ್ಕೆ 95,400 ಹೆಕ್ಟೇರ್ ಗಳಿಗೆ ಇಳಿದಿದೆ.

ರೇಷ್ಮೆ ಗೂಡಿನ ಬೆಲೆ ಕುಸಿದಿದ್ದು ರೇಷ್ಮೆ ಬೆಳೆಗಾರರಿಗೆ ಸಹಕರಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಹಯೋಗದಿಂದ ದಿನಾಂಕ 16-9-2002 ರಿಂದ 15-12-2002 ರವರೆಗೆ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ವಹಿವಾಟದ ಪ್ರತಿ ಕೆಜಿ ಗೂಡಿಗೆ ರೂ.10 ರ ಸಹಾಯಧನ ನೀಡಲಾಯಿತು.

ಚೀನಾ ದೇಶದ ರೇಷ್ಮೆ ಸುರಿ ನೀತಿ ವಿರುದ್ಧ ಇಲಾಖೆ ಮತ್ತು ಕೇಂದ್ರ ರೇಷ್ಮೆ ಮಂಡಳಿಯು ಸಲ್ಲಿಸಿದ್ದ ಮನವಿಯು ಪುರಸ್ಕೃತವಾಗಿ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕೆ ಮಂತ್ರಾಲಯವು ದಿನಾಂಕ 20-12-2002 ರ ಅಧಿಸೂಚನೆಯಲ್ಲಿ ಚೀನಾ ದೇಶದ ಆಂಟಿ ಡಂಪಿಂಗ್ ಶುಲ್ಕ ಸೇರಿ ಕನಿಷ್ಠ 33.19 ಅಮೇರಿಕನ್ ಡಾಲರ್‌ಗಳಿಗೆ ಕಡಿಮೆ ಇಲ್ಲದ ದರದಲ್ಲಿ 2ಎ ಮತ್ತು ಆದಕ್ಕಿಂತ ಕಡಿಮೆ ಗುಣಮಟ್ಟದ ರೇಷ್ಮೆಯನ್ನು ಭಾರದ ದೇಶಕ್ಕೆ ರಫ್ತು ಮಾಡಬಹುದೆಂದು ಮಧ್ಯಂತರ ಆದೇಶ ಹೊರಡಿಸಿದೆ. ಇದರಿಂದ ರಾಜ್ಯದ ರೇಷ್ಮೆ ಗೂಡಿನ ಮತ್ತು ಕಚ್ಚಾ ರೇಷ್ಮೆಯ ದರಗಳಲ್ಲಿ ಸ್ವಲ್ಪಮಟ್ಟಿಗೆ ಏರಿಕೆ ಕಂಡು ಬಂದು ರಾಜ್ಯದ ರೇಷ್ಮೆ ಉದ್ಯಮವು ಅಭಿವೃದ್ಧಿ ಹೊಂದಬಹುದೆಂಬ ಆಶಾಕಿರಣ ಮೂಡಿದೆ.

ಆ. ಕೇಂದ್ರ ರೇಷ್ಮೆ ಮಂಡಳಿ ಮತ್ತು ರಾಜ್ಯ ಸರ್ಕಾರದ ಸಹಯೋಗದ ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ ಹನಿ ನೀರಾವರಿ, ಪ್ರತ್ಯೇಕ ಹುಳು ಸಾಕಾಣಿಕೆ ಮನೆ, ಖಾಸಗಿ ಬಾಕಿ ಸಾಕಾಣಿಕೆ ಕೇಂದ್ರಗಳ ಸ್ಥಾಪನೆ, ಸೋಂಕು ನಿವಾರಕಗಳು, ಮಲ್ಟಿಎಂಡ್ ರೀಲಿಂಗ್ ಘಟಕಗಳ ಸ್ಥಾಪನೆ, ಬೈವೋಲ್ಟಿನ್ ರೇಷ್ಮೆ ಬೆಳೆಗಾರರಿಗೆ ಉಪಕರಣ ಸರಬರಾಜು ಮಲ್ಟಿ ಎಂಡ್ ರೇಷ್ಮೆ ಘಟಕದಲ್ಲಿ ಉತ್ಪಾದಿಸಿ ರೇಷ್ಮೆಗೆ ರೇಷ್ಮೆ ಗೂಡು ಹಾಗೂ ದಾರ ಪರೀಕ್ಷಾ ಘಟಕ ಸ್ಥಾಪನೆಗೆ ಹಾಗೂ ಪ್ರಚಾರ ಸಾಹಿತ್ಯ ಪ್ರಕಟಣೆ ಕಾರ್ಯ ಕ್ರಮಗಳಿಗೆ ಸಹಾಯಧನ ಒದಗಿಸಲಾಗುತ್ತಿದೆ. ಅಲ್ಲದೇ ರೇಷ್ಮೆ ಬೆಳೆಗಾರರಿಗೆ ರೆಂಬೆ ಪದ್ಧತಿ ಹುಳು ಸಾಕಾಣಿಕೆಗೆ ಸೊಪ್ಪು ಕತ್ತರಿಸುವ ಯಂತ್ರ, ರೋಟರಿ ಮಾಂಟೇಜ್‌ಗಳ ಉಪಯೋಗ ಗೂಡಿನ ಜೂಟು ಬಿಡಿಸುವ ಯಂತ್ರ, ಸಣ್ಣ ಪ್ರಮಾಣದ ಟ್ರಾಕ್ಟರ್ ಬಳಕೆ, ಪವರ್ ಸ್ಪ್ರೇಯರ್ಸ್‌ದಿಂದ ಸೋಂಕು ನಿವಾರಣೆ ಕೈಗೆತ್ತಿಕೊಳ್ಳಲು ಪ್ರೋತ್ಸಾಹಿಸಿ ರೇಷ್ಮೆ ಕೃಷಿಯಲ್ಲಿ ಆಧುನೀಕರಣ ಹಾಗೂ ಯಾಂತ್ರೀಕರಣ ತರಲಾಗುತ್ತಿದೆ.

ಇ.1. ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಹೊಸದಿಲ್ಲಿಗೆ ಹೋಗಿ, ಮಾನ್ಯ ಪ್ರಧಾನ ಮಂತ್ರಿಗಳು ಕೇಂದ್ರ ಸರ್ಕಾರದ ಹಣಕಾಸು ಜವಳಿ ಮತ್ತು ವಾಣಿಜ್ಯ ಸಚಿವರುಗಳನ್ನು ಸ್ವತಃ ಭೇಟಿ ಮಾಡಿ ಕೆಳಕಂಡ ಅಂಶಗಳ ಮೇಲೆ ಕ್ರಮ ತೆಗೆದುಕೊಳ್ಳಲು ಒತ್ತಾಯ ತಂದಿದ್ದಾರೆ.

ಅ. ಕಚ್ಚಾ ರೇಷ್ಮೆಯ ಆಮದು ಸುಂಕವನ್ನು ಹೆಚ್ಚಿಸುವುದು.

ಆ. ರಫ್ತು ಮಾಡುವ ಜವಳಿ ಉತ್ಪಾದನೆಗೆ ಬಳಸುವ ರೇಷ್ಮೆ ಪ್ರಮಾಣ ಮತ್ತು ಗುಣಮಟ್ಟದ ರೇಷ್ಮೆ ಆಮದಿಗೆ ಮಾತ್ರ ಅನುಮತಿ ನೀಡುವುದು.

ಇ. ಆಮದನ್ನು ಕೇಂದ್ರ ರೇಷ್ಮೆ ಮಂಡಳಿ ಮೂಲಕ ಮಾತ್ರ ಮಾಡಿ ವಿತರಿಸುವುದು.

ಈ. ವಶಪಡಿಸಿದ ರೇಷ್ಮೆಯನ್ನು ಸರ್ಕಾರಿ ಸಂಸ್ಥೆಗಳ ಮೂಲಕ ಹರಾಜು ಮಾಡುವುದು.

ಉ. ಕಳ್ಳಸಾಗಾಣಿಕೆಯನ್ನು ತಡೆಗಟ್ಟುವುದು.

2. ಮಾರುಕಟ್ಟೆಯಲ್ಲಿ ರೇಷ್ಮೆ ಗೂಡು ರೇಷ್ಮೆ ಧಾರಣೆಗಳ ದೃಡತೆಗಾಗಿ ಸರ್ಕಾರಿ ಸಂಸ್ಥೆಗಳಾದ ಕೆ.ಎಸ್.ಐ.ಸಿ.:ಕೆಎಸ್ಎಂಬಿ ಗಳಿಗೆ ರೇಷ್ಮೆ ಗೂಡು: ರೇಷ್ಮೆಯನ್ನು ಖರೀದಿಸಲು ಕೇಂದ್ರ ಸರ್ಕಾರದಿಂದ ಹಣ ಒದಗಿಸುವುದು.

3. ಇಲಾಖೆಯ ಕಾಯಿದೆ ಜಾರಿ ವಿಭಾಗವನ್ನು ಬಲಪಡಿಸಿ ಅನಧಿಕೃತ ರೇಷ್ಮೆ ವಹಿವಾಟನ್ನು ನಿಯಂತ್ರಿಸಲಾಗುತ್ತಿದೆ.

4. ಹೊಸ ತಾಂತ್ರಿಕತೆಗಳನ್ನು ಅಳವಡಿಸಿ ಇಳುವರಿ, ಉತ್ಪಾದಕತೆ ಮತ್ತು ಗುಣಮಟ್ಟ ಹೆಚ್ಚಿಸಲು ರೇಷ್ಮೆ ಬೆಳೆಗಾರರು ಮತ್ತು ನೂಲು ಬಿಚ್ಚಾಣಿಕೆದಾರರನ್ನು ಪ್ರೇರೇಪಿಸಲಾಗುತ್ತಿದೆ.

5. ದಿನಾಂಕ 16-9-2002ರಿಂದ 15-12-2002 ರ ಮೂರು ತಿಂಗಳ ಅವಧಿಗೆ ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ವಹಿವಾಟಾದ ಪ್ರತಿ ಕೆಜಿ ಗೂಡಿಗೆ ರೂ.10 ರ ಪ್ರೋತ್ಸಾಹಧನ ನೀಡಲಾಯಿತು. ಈ ವೆಚ್ಚವನ್ನು ರಾಜ್ಯ ಸರ್ಕಾರ ಮತ್ತು ಕೇಂದ್ರ ರೇಷ್ಮೆ ಮಂಡಳಿಯು ಸಮ ಪ್ರಮಾಣದಲ್ಲಿ ಭರಿಸುತ್ತವೆ.

ಚೀನಾ ದೇಶದ ರೇಷ್ಮೆ ಸುರಿ ನೀತಿ ವಿರುದ್ಧ ಇಲಾಖೆ ಮತ್ತು ಕೇಂದ್ರ ರೇಷ್ಮೆ ಮಂಡಳಿಯು ಸಲ್ಲಿಸಿದ ಮನವಿಯು ಪುರಸ್ಕೃತವಾಗಿ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕೆ ಮಂತ್ರಾಯಲಯವು ದಿನಾಂಕ 20-12-2002ರ ಅಧಿಸೂಚನೆಯಲ್ಲಿ ಚೀನಾ ದೇಶವು ಆಂಟಿ ಡಂಪಿಂಗ್ ಶುಲ್ಕ ಸೇರಿ ಕನಿಷ್ಠ 33.19 ಅಮೇರಿಕನ್ ಡಾಲರ್‌ಗಳಿಗೆ ಕಡಿಮೆ ಇಲ್ಲದ ದರದಲ್ಲಿ 2 ಎ ಮತ್ತು ಅದಕ್ಕಿಂದ ಕಡಿಮೆ ಗುಣ ಮಟ್ಟದ ರೇಷ್ಮೆಯನ್ನು ಭಾರತ ದೇಶಕ್ಕೆ ರಫ್ತು ಮಾಡಬಹುದೆಂದು ಅಧಿಸೂಚಿಸಿದೆ. ಇದರಿಂದ ರಾಜ್ಯದ ರೇಷ್ಮೆ ಗೂಡಿನ:ಕಚ್ಚಾ ರೇಷ್ಮೆಯ ಧಾರಣೆಗಳಲ್ಲಿ ಏರಿಕೆ ಕಂಡು ಬಂದು ರಾಜ್ಯದ ರೇಷ್ಮೆ ಉದ್ಯಮವು ಅಭಿವೃದ್ಧಿ ಹೊಂದಬಹುದೆಂಬ ಆಶಾಕಿರಣ ಮೂಡಿದೆ.

ರಾಜ್ಯದಲ್ಲಿ ರೇಷ್ಮೆ ಉದ್ಯಮದ ಸಮಗ್ರ ಬೆಳವಣಿಗೆಗೆ ರೇಷ್ಮೆ ಗುಣಮಟ್ಟ, ಉತ್ಪಾದನೆ ಮತ್ತು ಉತ್ಪಾದಕತೆ ಹೆಚ್ಚಿಸಲು ಹೊಸ ತಾಂತ್ರಿಕತೆಗಳ ಅಳವಡಿಕೆ ಮತ್ತು ಕೇಂದ್ರ ರೇಷ್ಮೆ ಮಂಡಳಿಯ ಸಹಯೋಗದ ಕೆಟಲಿಟಿಕ್ ಕಾರ್ಯಕ್ರಮ ಹಾಗೂ ಗುಣಾತ್ಮಕ ರೇಷ್ಮೆ ಸಂಘಗಳನ್ನು ಸ್ಥಾಪಿಸಿ ರೇಷ್ಮೆ ಗುಣಮಟ್ಟವನ್ನು ಸುಧಾರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಇತರೆ ಕಾರ್ಯಕ್ರಮಗಳ ಮೂಲಕ ಅನೇಕ ಸೌಲಭ್ಯ:ಸಹಾಯಧನ ಒದಗಿಸಿ ರೇಷ್ಮೆ ಬೆಳೆಗಾರರನ್ನು ಪ್ರೋತ್ಸಾಹಿಸಲಾಗುತ್ತಿದೆ.

ದೊಡ್ಡಬಳ್ಳಾಪುರದಲ್ಲಿ ನೇಕಾರರಿಗೆ ಮನೆಗಳನ್ನು ನಿರ್ಮಿಸುವುದು

397(373) ಶ್ರೀ ವಿ. ಕೃಷ್ಣಪ್ಪ(ದೊಡ್ಡಬಳ್ಳಾಪುರ ಕ್ಷೇತ್ರ): ಮಾನ್ಯ ರೇಷ್ಮೆ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ನೇಕಾರರಿಗೆ ಮನೆಗಳನ್ನು ಕಟ್ಟಿಸಿ ಕೊಡಲು ಸರ್ಕಾರ ಯಾವ ಕ್ರಮಗಳನ್ನು ಹಮ್ಮಿಕೊಂಡಿದೆ?